289 (836) ಶ್ರೀ ಅಂಜನಾ ಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು 2006–07ರ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ನಿಗದಿ ಮಾಡಿದ ಮತ್ತು ಬಿಡುಗಡೆ ಮಾಡಿದ ಹಣವೆಷ್ಟು;

ಆ) ಬಿಡುಗಡೆಯಾದ ಹಣದಲ್ಲಿ ಶೇ. 18ರಷ್ಟು ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ವಾಸಿಸುವ ಹಳ್ಳಿಗಾಡಿನ ಯಾವ ಯಾವ ರಸ್ತೆ ಕಾಮಗಾರಿಗಳನ್ನು ಹಾಗೂ ಇನ್ನಿತರೇ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ? ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :
2006–07ರ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ನಿಗದಿ ಮಾಡಿದ ಮತ್ತು ಬಿಡುಗಡೆ ಮಾಡಿದ ಹಣದ ವಿವರ;

ಲೆಕ್ಕ ಶೀರ್ಷಿಕೆ	ನಿಗದಿಪಡಿಸಿದ ಅನುದಾನ	ಆರ್ಥಿಕ ಇಲಾಖೆಯಿಂದ ಬಿಡುಗಡೆಯಾದ ಹ.ಭ.ಪತ್ರ
ಅ ಕಟ್ಟಡಗಳು (ಯೋಜನೆ		
2059 ಯೋಜನೆ	400.00	128.00
2216 ಯೋಜನೆ	400.00	118.70
4059 ಲೋಇ ಯೋಜನೆ	8633.00	6690.58
4059 ಉಚ್ಚ ನ್ಯಾಯಾಲಯ ಸಂಚಾರಿ ಪೀಠ	3945.00	500.00
4216 ವಸತಿ	1560.00	521.69
ಒಟ್ಟು	14938.00	7958.97
ಆ ರಸ್ತೆ ಮತ್ತು ಸೇತುವೆ		
5054 ರಸ್ತೆ ಮತ್ತು ಸೇತುವೆ (ORF)	6066.00	4701.15
5054 ತುರ್ತು ಕಾಮಗಾರಿಗಳು & ಭೂಸ್ವಾಧೀನ	2050.00	1787.62

5054 ಬೆಂಗಳೂರು ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ	20000.00	8961.30
5054 NABARD	13500.00	13499.790
5054 ಸಕ್ಕರೆ ಕಾರ್ಖಾನೆ ರಸ್ತೆಗಳು	47.00	32.78
3054 ಯೋಜನೆ (ಮುಮಂಗ್ರಾರನಿ)	28271.00	21910.02
ಒಟ್ಟು	69934.00	50892.74
ಇ ಕಟ್ಟಡಗಳು –ಯೋಜನೇತರ		
2059 ಲೋಇ ಕಾಮಗಾರಿಗಳು	10312.00	7982.62
2059 (12ನೇ ಹಣಕಾಸು ಯೋಜನೆ)	1320.00	60.75
2216 ವಸತಿ	3984.00	3087.60
2216 ಪೀಠೋಪಕರಣ	473.00	322.04
ಒಟ್ಟು	16089.00	11453.01
ಈ. ರಸ್ತೆ ಮತ್ತು ಸೇತುವೆ (ಯೋಜನೇತರ)		
3054 ಯೋಜನೇತರ (12ನೇ ಹಣಕಾಸು)	14615.00	3420.70
5054 ಸಿಆರ್ಎಫ್	15000.00	4800.00
ಒಟ್ಟು	29615.00	8220.07
ಕೇಷಿಪ್	56300.00	42000
ಒಟ್ಟು	186876.00	120524

ಆ) ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ರಾಜ್ಯ ಹೆದ್ದಾರಿಗಳ ದುರಸ್ತಿ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತಿದ್ದು, ಹಳ್ಳಿಗಾಡಿನ ರಸ್ತೆಗಳು ಇಲಾಖಾ ವ್ಯಾಪ್ತಿಗೊಳಪಡುವುದಿಲ್ಲ.

290 (837) ಶ್ರೀ ಅಂಜನಾ ಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ ಸಾವಿರಾರು ಬಡ ಜನತೆಗೆ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉಚಿತ ವಿದ್ಯುತ್ ಸೌಕರ್ಯ